# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಮುಳಬಾಗಿಲು.

ಓ.ಎಸ್. ನಂ. 129/2024

ದಿನಾಂಕ ಃ 28.04.2026.

| | | |
|---|---|---|
| ಹೆಸರು | ಃಶಿವಗಂಗಯ್ಯ. ಹೆಚ್ | ಸಿಡಬ್ಲ್ಯೂ -01 |
| ತಂದೆ ಹೆಸರು | ಃ ಹೊನ್ನಯ್ಯ | |
| ವಯಸ್ಸು | ಃ58 ವರ್ಷ | |
| ಉದ್ಯೋಗ | ಃಸರ್ಕಾರಿ ಭೂ ದಾಖಲೆ ಸಹಾಯಕ ನಿರ್ದೇಶಕರು | |
| ವಾಸಸ್ಥಳ | ಃಮುಳಬಾಗಿಲು | ಪ್ರಮಾಣ ವಚನ ಬೋಧಿಸಲಾಯಿತು. |

## ಮುಖ್ಯ ವಿಚಾರಣೆಃ ನ್ಯಾಯಾಲಯದಿಂದ

ನಾನು ಈ ಪ್ರಕರಣದಲ್ಲಿ  ನ್ಯಾಯಾಲಯದ ನಿಯೋಗಿಯಾಗಿ ನೇಮಕಗೊಂಡಿರುತ್ತೇನೆ.  ಆ ಪ್ರಕಾರ ನಾನು ನ್ಯಾಯಾಲಯದಿಂದ ದಿಃ 12.01.2026 ರಂದು ವಾರಂಟನ್ನು ಪಡೆದುಕೊಂಡು ದಿನಾಂಕ.29.01.2026 ರಂದು ಉಭಯಪಕ್ಷಗಾರರಿಗೆ ನೋಂದಾಣಿ ಅಂಚೆ ಮೂಲಕ ನೋಟೀಸಗಳನ್ನು ನೀಡಿ ದಿಃ 04.02.2026 ರಂದು ಬೆಳ್ಳಗ್ಗೆ 11-00 ಗಂಟೆಗೆ ಮುಳಬಾಗಿಲು ತಾಲ್ಲೂಕಿನ, ಆವಣಿ ಹೋಬಳಿ, ದೇವರಾಯಸುದ್ರ ಗ್ರಾಮದ ದಾವಾ ಆಸ್ತಿಗಳಲ್ಲಿ ಪಕ್ಷಗಾರರು ಹಾಜರಿರಲು ಸೂಚಿಸಿರುತ್ತೇನೆ.

2. ನಿಗದಿಸಿ ಸೂಚಿಸಿದಂತೆ ದಿನಾಂಕದಂದು ಅಂದರೆ ದಿನಾಂಕ.04.02.2026 ರಂದು ಬೆಳ್ಳಗ್ಗೆ 11-00 ಗಂಟೆಗೆ ಆವಣಿ ಹೋಬಳಿ, ದೇವರಾಯಸುದ್ರ ಗ್ರಾಮದ ದಾವಾ ಆಸ್ತಿಗೆ ಭೇಟಿ ನೀಡಿದಾಗ ವಾದಿ ಮತ್ತು ಪ್ರತಿವಾದಿಯವರಿಬ್ಬರು ಹಾಜರಿದ್ದರು.

3. ದಾವಾ ಆಸ್ತಿಗಳಲ್ಲಿನ ಬಾಂದುಕಲ್ಲುಗಳನ್ನು ನೋಡಿಕೊಂಡು, ಪಕ್ಕಾ ಬುಕ್,  ಅಕಾರ್ ಬಂದ್ ಹಾಗೂ ಟಿಪ್ಪಣಿ ಗಳ ಆಧಾರದ ಮೇಲೆ ದಾವಾದ ಜಮೀನುಗಳನ್ನು ಪರಿಶೀಲಿಸಿ, ಜಂಟಿ ಲಿಖಿತ ಸೂಚನವಳಿಯ ಅನುಗುಣವಾಗಿ ರೋವರ್ ಮೀಷನ್ ನ ಮೂಲಕ ಅಳತೆ ಮಾಡಿ ಸ್ಕೆಚ್ ನ್ನು ತಯಾರಿಸಿ, ನನ್ನ ವರದಿಯನ್ನು ತಯಾರಿಸಿರುತ್ತೇನೆ.

**4.** ಅಳತೆ ಕಾರ್ಯ ಪೂರ್ಣಗೊಂಡ ನಂತರ ಪಂಚನಾಮೆಯನ್ನು ಜರುಗಿಸಿ ಪಕ್ಷಕಾರರ ಹಾಗೂ ಸ್ಥಳದಲ್ಲಿದ್ದವರ ಸಹಿ ಪಡೆದಿರುತ್ತೇನೆ.

**5**. ಸಾಕ್ಷಿಯು ಕಮೀಷನರ್ ವಾರೆಂಟ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಸಿ.1 ಅಂತ ಗುರುತಿಸಲಾಯಿತು. ತಿಳುವಳಿಕೆ ಪತ್ರವನ್ನು ಮತ್ತು 2 ಅಂಚೆ ರಸೀದಿಗಳನ್ನು ಒಟ್ಟಾಗಿ ನಿ.ಸಿ.2 ಅಂತ, ಮಹಜರ್ ನ್ನು ನಿ.ಸಿ.3 ಅಂತ ಗುರುತಿಸಲಾಯಿತು. ಉಭಯ ಪಕ್ಷಗಾರರು ನೀಡಿರುವ ಜಂಟಿ ಲಿಖಿತ ಸೂಚನಾವಳಿಯನ್ನು ನಿ.ಸಿ.4 ಅಂತ, ದಿ. 06.02.2026 ರ ಪತ್ರವನ್ನು ನಿ.ಸಿ-5 ಎಂದು, ವಾದಿ ಮತ್ತು ಪ್ರತಿವಾದಿಯವರ ಪ್ರಶ್ನಾವಳಿಗಳಿಗೆ ನೀಡಿದ ಉತ್ತರವನ್ನು ನಿ.ಸಿ-6 ಎಂದು, 3 ಸ್ಕೆಚ್ ಗಳನ್ನು ಕ್ರಮವಾಗಿ ನಿ.ಸಿ-7 ರಿಂದ 9 ಎಂದು, ಗ್ರಾಮ ನಕ್ಷೆಯ ದೃಢಿಕೃತ ನಕಲನ್ನು ನಿ.ಸಿ-10 ಎಂದು, ರಾಷ್ಟ್ರೀಯ ಹೆದ್ದಾರಿ ಬಗ್ಗೆ ಭೂ ಸ್ವಾಧಿನ ಆದ ಜಮೀನಿನ ಬಾಬ್ತು ಜಂಟಿ ಅಳತೆ ನಕ್ಷೆಯನ್ನು ನಿ.ಸಿ-11 ಎಂದು, ದಿ. 13.11.2026 ರ ಪತ್ರವನ್ನು ನಿ.ಸಿ-12 ಎಂದು, ಗಣಕೀಕೃತ ಪಹಣಿ ಪತ್ರಿಕೆಯನ್ನು ನಿ.ಸಿ-13 ಎಂದು, ಡಿಟೇಲ್ಸ್ ಸರ್ವೆ ಪ್ರತಿಯ ದೃಢಿಕೃತ ನಕಲನ್ನು ನಿ.ಸಿ-14 ಎಂದು, ಮೂಲ ಟಿಪ್ಪಣಿಯ ದೃಢಿಕೃತ ನಕಲನ್ನು ನಿ.ಸಿ-15 ಎಂದು, 2 ಪುಟಗಳ ಅಕಾರ್ ಬಂದ್ ನ ದೃಢಿಕೃತ ನಕಲನ್ನು ಒಟ್ಟಾಗಿ ನಿ.ಸಿ-16 ಎಂದು, ಇನ್ನೊಂದು ಅಕಾರ್ ಬಂದ್ ನ್ನು ನಿ.ಸಿ-17 ಎಂದು, ಕಮೀಷನರ್ ವರದಿಗೆ ಪ್ರತಿವಾದಿ ಪರ ವಕೀಲರು ಸಲ್ಲಿಸಿರುವ ತಕರಾರನ್ನು ನಿ.ಸಿ.18 ಅಂತ ಹಾಗೂ ವಾದಿ ಪರ ವಕೀಲರು ತಕರಾರಿಗೆ ಸಲ್ಲಿಸಿರುವ ರಿಜಾಯಿಂಡರ್ ನ್ನು ನಿ.ಸಿ-19 ಎಂದು ಗುರುತಿಸಲಾಯಿತು.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.